## ಕರ್ನಾಟಕವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 650 |
| ಸದಸ್ಯರ ಹೆಸರು | ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ |
| ಉತ್ತರಿಸಬೇಕಾದ ದಿನಾಂಕ | 22.07.2019 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ವಸತಿಗೃಹಗಳ ಸಂಖ್ಯೆ ಎಷ್ಟು; (ಬಾಲಕರ/ಬಾಲಕಿಯರ ವಸತಿಗೃಹಗಳ ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರ ಕೆಳಕಂಡಂತಿರುತ್ತದೆ. |

| ವಿವರ | ವಿದ್ಯಾರ್ಥಿನಿಲಯಗಳ ಸಂಖ್ಯೆ | | |
|---|---|---|---|
| | ಬಾಲಕ | ಬಾಲಕಿ | ಒಟ್ಟು |
| ಮೆಟ್ರಿಕ್-ಪೂರ್ವ | 3 | 2 | 5 |
| ಮೆಟ್ರಿಕ್-ನಂತರ | 2 | 4 | 6 |
| ಒಟ್ಟು | 5 | 6 | 11 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಆ | ಸದರಿ ವಸತಿಗೃಹಗಳಲ್ಲಿ ಇರುವ ವಾರ್ಡನ್ ಗಳ ವಿವರ ನೀಡುವುದು; | ಹಳಿಯಾಳ ತಾಲ್ಲೂಕಿನ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯ ಮೇಲ್ವಿಚಾರಕರ ವಿವರ ಕೆಳಕಂಡಂತಿರುತ್ತದೆ. |

| ಕ್ರ ಸಂ | ವಿದ್ಯಾರ್ಥಿನಿಲಯದ ಹೆಸರು ಮತ್ತು ಸ್ಥಳ | ಕಾರ್ಯನಿರ್ವಹಿಸುತ್ತಿರುವ ನಿಲಯ ಮೇಲ್ವಿಚಾರಕರ ಹೆಸರು |
|---|---|---|
| 1 | ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮುರ್ಕವಾಡ | ಎನ್ ಎಸ್ ರಜಪೂತ |
| 2 | ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಾಂಬ್ರಾಣಿ | ಚಿದಾನಂದ ಚಿಕ್ಕೊಪ್ಪ |
| 3 | ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ದಾಂಡೇಲಿ | ಹೆಲನ್ ಪಿಂಟೋ |
| 4 | ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಳಿಯಾಳ | ಗುಲಾಬ್‌ಸಿಂಗ್ ರಜಪೂರ (ಪ್ರಭಾರ) |
| 5 | ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಹಳಿಯಾಳ | ಎನ್ ಆರ್ ಹಿಟ್ಟಣಗಿ (ಪ್ರಭಾರ) |
| 6 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಹಳಿಯಾಳ (ಇಂಜಿನಿಯರಿಂಗ್) | ಎನ್ ಎಸ್ ರಜಪೂತ್ (ಪ್ರಭಾರ) |
| 7 | ಮೆಟ್ರಿಕ್ ನಂತರ ಬಾಲಕಿಯರ | ಎನ್ ಆರ್ ಹಿಟ್ಟಣಗಿ |

| | | | | |
|---|---|---|---|---|
| | | | ವಿದ್ಯಾರ್ಥಿ ನಿಲಯ, ಹಳಿಯಾಳ | (ಪ್ರಭಾರ) |
| | | 8 | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯ, ದಾಂಡೇಲಿ | ಹೆಲನ್ ಪಿಂಟೋ (ಪ್ರಭಾರ) |
| | | 9 | ಮೆಟ್ರಿಕ್ ನಂತರ ನರ್ಸಿಂಗ್ ಬಾಲಕಿಯರ ವಿದ್ಯಾರ್ಥಿ ನಿಲಯ, ದಾಂಡೇಲಿ | ಸಹದೇವ ಗೋಡ್ಸೆ (ಪ್ರಭಾರ) |
| | | 10 | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯ, ಹಳಿಯಾಳ | ಎನ್ ಎಸ್ ರಜಪೂತ್ (ಪ್ರಭಾರ) |
| | | 11 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಹಳಿಯಾಳ | ಧನಂಜಯ ನಾಯ್ಕ |

| | | |
|---|---|---|
| ಇ | ಈಗಾಗಲೇ ಕೆಲವೊಂದು ಬಾಲಕಿಯರ ವಸತಿಗೃಹದಲ್ಲಿ ವಾರ್ಡನ್ ಹುದ್ದೆ ಗಂಡು ಮಕ್ಕಳು ನಿರ್ವಹಿಸುತ್ತಿರುವುದರಿಂದ ಕೆಲವೊಂದು ವಸತಿಗೃಹದಲ್ಲಿ ಅಹಿತಕರ ಘಟನೆ ನಡೆಯುತ್ತಿದ್ದು, ನಿಯಮದ ಪ್ರಕಾರ ಬಾಲಕಿಯರ ವಸತಿಗೃಹದಲ್ಲಿ ಹೆಣ್ಣು ಮಕ್ಕಳೇ ವಾರ್ಡನ್ ಹುದ್ದೆ ನಿಭಾಯಿಸಲು ಸರ್ಕಾರದ ಆದೇಶ ಇರುವುದೇ; (ವಿವರ ನೀಡುವುದು) | ಯಾವುದೇ ಸರ್ಕಾರದ ಆದೇಶ ಇರುವುದಿಲ್ಲ. ಆದರೆ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಹಿಳಾ ನಿಲಯ ಪಾಲಕರು / ಮೇಲ್ವಿಚಾರಕರನ್ನೇ ನೇಮಿಸಲು ಇಲಾಖೆಯಿಂದ ಸುತ್ತೋಲೆಗಳ ಮೂಲಕ ಸೂಚನೆ ನೀಡಲಾಗಿರುತ್ತದೆ.<br>ಹಳಿಯಾಳ ತಾಲ್ಲೂಕಿನಲ್ಲಿ ಒಟ್ಟು 6 ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಒಬ್ಬರೇ ಮಹಿಳಾ ನಿಲಯ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿರುವುದರಿಂದ, ವಿದ್ಯಾರ್ಥಿ ನಿಲಯಗಳ ಸುಗಮ ನಿರ್ವಹಣೆ ದೃಷ್ಟಿಯಿಂದ ಇತರೆ ಸಿಬ್ಬಂದಿಗಳಿಗೆ ತಾತ್ಕಾಲಿಕವಾಗಿ ಪ್ರಭಾರ ವಹಿಸಲಾಗಿರುತ್ತದೆ. |
| ಈ | ವಸತಿಗೃಹದಲ್ಲಿ ವಾಸ್ತವ್ಯ ಮಾಡುತ್ತಿರುವ ಹೆಣ್ಣು ಮಕ್ಕಳ ಹಿತದೃಷ್ಟಿಯಿಂದ ತಾಲ್ಲೂಕಿನಲ್ಲಿ ಬಾಲಕಿಯರ ವಸತಿಗೃಹಕ್ಕೆ ಹೆಣ್ಣು ಮಕ್ಕಳೇ ವಾರ್ಡನ್ ಹುದ್ದೆ ನಿಭಾಯಿಸಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ನೀಡುವುದು) | ಹಳಿಯಾಳ ತಾಲ್ಲೂಕಿನಲ್ಲಿ ಖಾಲಿ ಇರುವ ಮಹಿಳಾ ನಿಲಯ ಮೇಲ್ವಿಚಾರಕರ ಹುದ್ದೆಯೂ ಸೇರಿದಂತೆ ಇಲಾಖೆಯಲ್ಲಿ ಖಾಲಿ ಇರುವ ಮಹಿಳಾ/ಪುರುಷ ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಕೆ ಪಿ ಎಸ್ ಸಿ ಗೆ ಪ್ರಸ್ತಾವನೆ ಸಲ್ಲಿಸಿದ್ದು, ಕೆ ಪಿ ಎಸ್ ಸಿ ಯಿಂದ ದಿನಾಂಕ: 25.11.2017 ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಅಂತಿಮ ಆಯ್ಕೆ ಪಟ್ಟಿ ಪ್ರಕಟಗೊಂಡ ನಂತರ ಮಹಿಳಾ ವಿದ್ಯಾರ್ಥಿ ನಿಲಯಗಳಿಗೆ ನೇಮಕಾತಿ ಮಾಡಲಾಗುವುದು. |

ಕಡತ ಸಂಖ್ಯೆ:ಹಿಂವಕ 62 ಬಿಇಟಿ 2019

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು